ತಾರೀಖು 21ನೆ ಫೆಬ್ರವರಿ 1907.

ನಂ. 7241—ಸ್ಯಾನಿಟರಿ 66-06-31, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಸಮೂಹಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳ ಕೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಚೀಕನಹಳ್ಳಿ	ಬೇಲೂರು.
ಗಾನಹಳ್ಳಿ	ಹಾಸನ.

ತಾರೀಖು 26ನೆ ಫೆಬ್ರವರಿ 1907.

ನಂ. 7380—ಸ್ಯಾನಿಟರಿ. 129-06—6, ಶಿವಮೊಗ್ಗ ಡಿಸ್ಟ್ರಿಕ್ಟ್ ಶಿವಮೊಗ್ಗ ತಾಲ್ಲೂಕಿನ ಕೂಡ್ಲಿ ಗ್ರಾಮಕ್ಕೆ ಶ್ರೀ ಸಂಗಮೇಶ್ವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚ್ 1ನೆ ತಾರೀಖಿನಿಂದ 1907ನೆ ಇಸವಿ ಮಾರ್ಚ್ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 14ನೆ ಫೆಬ್ರವರಿ 1907.

ನಂ. 7021—ಸ್ಯಾ. 21—06—82, ಘನವನ್ನೆತ್ತಿದ ಮೈಸೂರು ಸೀಮೆಯ ರೆಸಿಡೆಂಟರ ಮೊದಲನೆ ಅಸಿಸ್ಟೆಂಟರಿಂದ ಬಂದ 1907ನೆ ಇಸವಿ ಫೆಬ್ರವರಿ 6ನೆ ತಾರೀಖಿನ 99ನೆ ನಂಬರ್ ಇಂಡಾರ್ಸುನೆಂಟನೊಡನೆ ತಲ್ಪಿದ ಮದ್ರಾಸು ಸರ್ಕಾರದವರ ಈ ಕೆಳಗೆ ಸಮೂಹಿಸುವ ಇಸ್ತಿಹಾರ್‌ನಾಮೆಯನ್ನು ಸಮಸ್ತ ಜನರ ತಿಳಿವಳಿಕೆಯ ಬಗೆ ಪುನಃ ಪ್ರಕಟಿಸಿ ಇದೆ :—

ಬರುವ ಶ್ರೀ ವಿಕಾಂಬರನಾಥ ಸ್ವಾಮಿಯ ಬ್ರಂಹೋತ್ಸವ ಜಾತ್ರೆಯಕಾಲಕ್ಕೆ ಚಂಗಲ್‌ಪಟ್ ಡಿಸ್ಟ್ರಿಕ್ಟ್ ಕಾಂಜೀವರಂ ತಾಲ್ಲೂಕು ಕಾಜೀವರಂ ಎಂಬ ಸ್ಥಳಕ್ಕೆ ಬಳ್ಳಾರಿ ಮತ್ತು ಸೇಲಂ ಡಿಸ್ಟ್ರಿಕ್ಟುಗಳಿಂದಲೂ, ಮೈಸೂರು ಸೀಮೆಯಿಂದಲೂ, ಮತ್ತು ಪ್ಲೇಗು ತಗಲಿರುವುದಾಗಿ ಪ್ರಕಟಿಸಲ್ಪಟ್ಟಿರುವ ಇತರ ಸ್ಥಳಗಳಿಂದಲೂ ಬರುವ ಯಾತ್ರಿಕರನ್ನು ಬಿಟ್ಟರೆ ಸದರಿ ಕಾಂಜೀವರಂ ಸ್ಥಳದಲ್ಲಿ ಪ್ಲೇಗು ತಗುಲುವ ಅಪಾಯವಿರುವುದೆಂದು ಸಭಾ ಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ಕಂಡು ಬಂದಿರುವುದರಿಂದ:

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಆಕ್ಟಿನ ಮೇರೆಗೆ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾ ಸಮೇತರಾದ ಗವರ್ನರವರು, 1907ನೆ ಇಸವಿಯ ಮಾರ್ಚ್ 11ನೆ ತಾರೀಖಿನಿಂದ 31ನೆ ತಾರೀಖಿನವರೆಗೆ (ಆದೂ ಸೇರಿ) ಸದರಿ ಸ್ಥಳಗಳಿಂದ ಮೇಲೆ ಕಂಡ ಜಾತ್ರೆಗೆ ಜನರು ಹೋಗಕೂಡದೆಂದು ನಿಷೇಧಿಸುತ್ತಾರಲ್ಲದೆ, ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿಯೂ ಮತ್ತು ಮದ್ರಾಸು ರೈಲ್ವೆಯ ಗುಡಪಲ್ಲಿ, ಕುಪ್ಪಂ, ಮುಲಕೂರು, ಮತ್ತು ಪಚ್ಚೂರು ಸ್ಟೇಷನುಗಳಲ್ಲಿಯೂ, ದಕ್ಷಿಣ ಇಂಡಿಯಾ ರೈಲ್ವೆಯ ಅರಕೋಣಂ, ಪಲ್ಲಾರು, ಕಾಂಜೀವರಂ, ವಾಲಾಜಾಬಾದು, ವಿಲಿಯಂಪಾಕಂ, ಅತ್ತೂರು ಮತ್ತು ಚಿಂಗಲ್‌ಪಟ್ ಸ್ಟೇಷನುಗಳಿಗೂ, ಮದ್ರಾಸು ರೈಲ್ವೆಯ ಅರಕೋಣಂ ಸ್ಟೇಷನಿಗೂ, ಸದರಿ ಜಾತ್ರೆಯಲ್ಲಿ ಹಾಜರಿರಬೇಕೆಂದು ಉದ್ದೇಶವಿರುವ ಅಥವಾ ಉದ್ದೇಶವಿಲ್ಲವನೆಂದು ನಂಬಬಹುದಾದ ಯಾವ ಮನುಷ್ಯನಿಗೂ ಸದರಿ ತಾರೀಖುಗಳ ನಡುವೆ ಟಿಕೆಟ್ ಮಾರಕೂಡದೆಂದು ಆಜ್ಞೆ ಮಾಡುತ್ತಾರೆ.

ಈ ಇಸ್ತಿಹಾರಿಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವವರನ್ನೆಲ್ಲಾ ಹಿಂದಕ್ಕೆ ಕಳುಹಿಸುತ್ತದೆ.

ತಾರೀಖು 14ನೆ ಫೆಬ್ರವರಿ 1907.

ನಂ. 7022—ಸ್ಯಾನಿಟರಿ. 1-06—84, ಘನವನ್ನೆತ್ತಿದ ಮೈಸೂರು ಸೀಮೆಯ ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರ 1907ನೆ ಇಸವಿ ಫೆಬ್ರವರಿ 6ನೆ ತಾರೀಖಿನ ಪಿ. 105ನೆ ನಂಬರ್ ಇಂಡಾರ್ಸುನೆಂಟನೊಡನೆ ತಲುಪಿದ ಇದರಡಿ ಕಂಡ ಮದ್ರಾಸು ಸರ್ಕಾರದ ಇಸ್ತಿಹಾರ್‌ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

ಬಳ್ಳಾರಿ ಡಿಸ್ಟ್ರಿಕ್ಟು ಹರಪನಹಳ್ಳಿ ತಾಲ್ಲೂಕು ಕುಲಹಳ್ಳಿ ಎಂಬ ಸ್ಥಳದಲ್ಲಿ ನಡೆಯುವ ಗೋಣಿ ಬಸಪ್ಪನ ರಥೋತ್ಸವ ಕಾಲದಲ್ಲಿ ಯಾತ್ರಾರ್ಥಿಗಳನ್ನು ಸದರಿ ಸ್ಥಳಕ್ಕೆ ಬಿಟ್ಟರೆ ಅಲ್ಲಿ ಪ್ಲೇಗು ತಗುಲುವ ಅಪಾಯವಿರುವುದಾಗಿ ಸಭಾ ಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ತೋರಿಬಂದಿರುವುದರಿಂದ :

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಆಕ್ಟಿನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾ ಸಮೇತರಾದ ಗವರ್ನರವರು 1907ನೆ ಇಸವಿ ಫೆಬ್ರವರಿ 17ನೆ ತಾರೀಖಿನಿಂದ 27ನೆ ತಾರೀಖಿನ ವರೆಗೆ (ಆದೂ ಸೇರಿ) ಸದರಿ ರಥೋತ್ಸವಕ್ಕೆ ಯಾತ್ರಾರ್ಥಿಗಳು ಹೋಗಕೂಡದೆಂದು ನಿಷೇಧಿಸುವುದಲ್ಲದೆ, ಸದರಿ ತಾರೀಖುಗಳ ನಡುವೆ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ

ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಬ್ಯಾಡಗಿ, ದೇವರಗುಡ್ಡ, ಠಾಣೆಬಿನ್ನಾಳ, ಚಳ್ಳಿರಿ, ಹರಿಹರ ಮತ್ತು ದಾವಣಗೆರೆ ಸ್ಟೇಷನ್ ಗಳಿಗೆ ಸದರಿ ಸ್ಥಳಕ್ಕೆ ಹೋಗಬೇಕೆಂದು ಅಭಿಪ್ರಾಯವುಳ್ಳ ಅಥವಾ ಅಭಿಪ್ರಾಯವುಳ್ಳವನೆಂದು ನಂಬಲ್ಪಟ್ಟ ಯಾವ ಮನುಷ್ಯನಿಗೂ ರೈಲ್ವೆಯಲ್ಲಿ ಪ್ರಯಾಣ ಮಾಡುವುದಕ್ಕೆ ಟಿಕೆಟ್ಟುಗಳನ್ನು ಮಾರಕೂಡದೆಂದು ಆಜ್ಞಾಪಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವವರೆಲ್ಲರೂ ವಾಪಸು ಕಳುಹಿಸಲ್ಪಡುವರು.

ತಾರೀಖು 28ನೆ ಫೆಬ್ರವರಿ 1907.

ನಂ. 7383—ಸ್ಯಾನಿಟರಿ 66-06—32, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಹಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9385—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗೆ ಕೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಗೊಲ್ಲರಹೊಸಹಳ್ಳಿ	ಚನ್ನರಾಯಪಟ್ಟಣ.

ತಾರೀಖು 5ನೆ ಮಾರ್ಚಿ 1907.

ನಂ. 7587—ಸ್ಯಾನಿಟರಿ 156-06—12, ಕೋಲಾರ ಡಿಸ್ಟ್ರಿಕ್ಟು ಬಾಂಗಿಂಗೇಟಿ ತಾಲ್ಲೂಕಿನ ಬಾಂಗಿಂಗೇಟೆಗೆ ಶ್ರೀ ಕೋದಂಡ ರಾಮಸ್ವಾಮಿಯವರ ರಥೋತ್ಸವ ಮತ್ತು ದನಗಳ ಸಂತೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿನ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಮೇ 2ನೆ ತಾರೀಖಿನಿಂದ 1907ನೆ ಜೂನ್ 2ನೆ ತಾರೀಖಿನವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವ ಮತ್ತು ದನಗಳ ಸಂತೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಮಾರ್ಚಿ 1907.

ನಂ. 7589—ಸ್ಯಾನಿಟರಿ 170-06-10, ಮೈಸೂರು ಡಿಸ್ಟ್ರಿಕ್ಟು ಪ್ಯಾಂಡ್ರಾಕ್ಯ ಸಬ್ ತಾಲ್ಲೂಕಿನ ಮೇಲ್ಕೋಟೆಗೆ ವೈರಮುಡಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 20ನೆ ತಾರೀಖಿನಿಂದ 30ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಮಾರ್ಚಿ 1907.

ನಂ. 7591—ಸ್ಯಾನಿಟರಿ 150-06—6, ಬೆಂಗಳೂರು ಡಿಸ್ಟ್ರಿಕ್ಟು ಆನೇಕಲ್ಲು ತಾಲ್ಲೂಕಿನ ಹುಸ್ಕೂರು ಗ್ರಾಮಕ್ಕೆ ಮದ್ದೂರಮ್ಮನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 8ನೆ ತಾರೀಖಿನಿಂದ 12ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.